ಯುವ ಜಾಗೃತಿ

# ಧನ್ಯ ಭಗೀರಥ !

## (ಗಂಗಾವತರಣದ ಕಥೆ)

**ಸುರೇಶ್ ಕುಮಾರ್**

“ರಾಮಭದ್ರ, ಸಗರನು ಅಶ್ವಮೇಧಯಾಗ ಮಾಡುವಾಗ ಇಂದ್ರನು ಹೆದರಿದನು. ಮಾರುವೇಷದಲ್ಲಿ ಬಂದು ಕುದುರೆಯನ್ನು ಅಪಹರಿಸಿದನು. ಸಗರನು ತನ್ನ ವಿಧೇಯ ಮಕ್ಕಳನ್ನು ಕರೆದು, ‘ಮಕ್ಕಳೆ, ಕಳುವಾದ ಯಾಗದ ಕುದುರೆಯನ್ನು ಹುಡುಕಿರಿ’ ಎಂದನು. ಅವರು ಕುದುರೆ ಹುಡುಕುತ್ತ ಕಪಿಲಮುನಿ ಹಾಗೂ ಕುದುರೆಯನ್ನು ಒಟ್ಟಾಗಿ ಕಂಡರು. ಅವನೇ ಕುದುರೆ ಕದ್ದವನೆಂದು ಮಹರ್ಷಿಯೆಡೆಗೆ ಆಯುಧಗಳೊಡನೆ ರಭಸದಿಂದ ನುಗ್ಗಿದರು. ‘ದುಷ್ಟ ಬುದ್ಧಿಯೇ, ನಮ್ಮ ಕುದುರೆಯನ್ನು ಕದ್ದು, ಯಾಗವನ್ನು ಕೆಡಿಸಿ ಬಂದಿರುವೆಯಾ?’ ಎಂದರು. ಯೋಗಾರೂಢನಾಗಿದ್ದ ಮುನಿಯು ಅವರ ಮಾತು ಹಾಗೂ ಕೃತಿಯಿಂದ ಕ್ರೋಧಗೊಂಡನು. ಅಮಿತ ತೇಜಸ್ಸಿನೊಡನೆ ಹೂಂಕರಿಸಿದ ಪ್ರಖರತೆಯಿಂದಲೇ ಸಗರನ ಅರವತ್ತು ಸಾವಿರ ಮಕ್ಕಳು ಕ್ಷಣ ಮಾತ್ರದಲ್ಲಿ ಸುಟ್ಟು ಬೂದಿಯಾದರು. ಅವಿವೇಕದ ಅವಸರದಿಂದ ತಾವೇ ಅನಾಹುತಕ್ಕೆ ಒಳಗಾದರು. ಕುದುರೆ ಪ್ರತ್ಯಕ್ಷವಾಗಿದ್ದರೂ ಕದ್ದವನನ್ನು ಪ್ರಮಾಣಿಸುವುದರಲ್ಲಿ ವಿಫಲರಾದರು.

ಮಕ್ಕಳು ಬಾರದೆ ಆತಂಕಗೊಂಡ ಸಗರನು ಮೊಮ್ಮಗನನ್ನು ಕರೆದು, ‘ಅಂಶುಮಂತ, ನಿನ್ನ ಚಿಕ್ಕಪ್ಪಂದಿರು ಬರಲೇ ಇಲ್ಲ. ತಕ್ಷಣವೇ ಶೋಧನೆಗೆ ಹೊರಡಬೇಕು’ ಎಂದನು. ಅಂಶುಮಂತನು ಸಗರಪುತ್ರರು ಬೂದಿಯಾಗಿದ್ದ ಸ್ಥಳಕ್ಕೆ ಬಂದನು. ಪರ್ವತದಂತೆ ಬಿದ್ದಿದ್ದ ಅದು ತನ್ನ ಚಿಕ್ಕಪ್ಪಂದಿರ ಬೂದಿಯ ರಾಶಿಯೆಂದು ತಿಳಿದು ದುಃಖಗೊಂಡನು. ಹತ್ತಿರದಲ್ಲಿದ್ದ ಯಜ್ಞದ ಕುದುರೆಯನ್ನು ಕಂಡನು. ಸಂಸ್ಕಾರದ ಕ್ರಿಯೆಯಂತೂ ಅವರ ಮೃತ್ಯುವಿನೊಡನೆಯೇ ಆಗಿ ಹೋಗಿತ್ತು. ಮೊದಲಿಗೆ ಸಲಿಲ ಕ್ರಿಯೆ ಮಾಡಲು ನೀರಿಗಾಗಿ ಅರಸಿ, ಅಲೆದಾಡಿದರೂ ಎಲ್ಲಿಯೂ ನೀರಿನ ಸುಳಿವು ದೊರೆಯಲಿಲ್ಲ. ಆಗ ಗರುಡನು, ‘ಅಂಶುಮಂತ, ಇವರ ಸಂಹಾರದ ಹಿಂದೆ ಲೋಕಹಿತದ ಮಹತ್ತರ ಕಾರಣವಿದೆ. ಲೋಕಪಾವನೆಯಾದ ಗಂಗೆಯ ಜಲದಿಂದ ತರ್ಪಣ ಕೊಡು. ಅದರಿಂದ ಇವರಿಗೆ ಸ್ವರ್ಗಪ್ರಾಪ್ತಿಯಾಗುವುದು. ನಿನಗೆ ಸಾಧ್ಯವಾದಲ್ಲಿ ದೇವಲೋಕದಿಂದ ಭೂಮಿಗೆ ಗಂಗಾವತರಣವನ್ನು ಮಾಡಿಸು’ ಎಂದನು.

ಅಂಶುಮಂತನು ಅಯೋಧ್ಯೆಗೆ ಹಿಂದಿರುಗಿ, ಅಜ್ಜನಿಗೆ ಕುದುರೆಯನ್ನು ಕೊಟ್ಟು ಮೊದಲಿಗೆ ಯಾಗ ಪೂರ್ಣಗೊಳಿಸಿದನು. ನಂತರ ಎಲ್ಲ ವೃತ್ತಾಂತವನ್ನು ವಿವರವಾಗಿ ತಿಳಿಸಿದನು. ಸಗರನು ಅವರ ಕ್ರಿಯಾ, ಕರ್ಮ ಮಾಡುವುದರ ಬಗ್ಗೆ ಚಿಂತಿತನಾದರೂ



ಕಲೆ: ರಾಜಾ ರವಿವರ್ಮ

ಗಂಗೆ ಧರೆಗಿಳಿಯುವ ಉಪಾಯವೇ ಹೊಳೆಯಲಿಲ್ಲ. ಅದೇ ಚಿಂತೆಯಲ್ಲಿ ಚಿತೆಯೇರಿದನು.

ಅಂಶುಮಂತನೇ ರಾಜನಾದನು. ಅವನಿಗೆ ದಿಲೀಪನೆಂಬ ಪರಾಕ್ರಮಿ ಮಗನಿದ್ದನು. ಆದರೆ ಹಾಗೆಯೇ ಉಳಿದ ಪೂರ್ವಜರ ಶ್ರಾದ್ಧದ ಕಾರ್ಯದ ಕೊರತೆ, ಚಿಂತೆ ಅಂಶುಮಂತನ ಮನಸ್ಸನ್ನು ಕಾಡುತ್ತಿತ್ತು. ರಾಜ್ಯಭಾರದ ಜವಾಬ್ದಾರಿಯನ್ನು ಮಗನಿಗೆ ಒಪ್ಪಿಸಿದ. ಗಂಗಾವತರಣದ ಸಲುವಾಗಿ ೩೨,೦೦೦ ವರ್ಷ ದಾರುಣ ತಪಸ್ಸನ್ನು ಮಾಡಿದರೂ ಗಂಗಾವತರಣ ಆಗಲಿಲ್ಲ. ಕೊನೆಗೆ ಸ್ವರ್ಗಸ್ಥನಾದ. ವ್ಯಾಕುಲಿತಗೊಂಡ ದಿಲೀಪನು, ‘ಗಂಗೆಯನ್ನು ಭೂಮಿಗೆ ತಂದು ಪೂರ್ವಜರಿಗೆ ಹೇಗೆ ಸದ್ಗತಿ ಪ್ರಾಪ್ತಿ ಮಾಡುವುದು?’ ಎಂದು ಯೋಚಿಸುತ್ತಿದ್ದ. ಅವನಿಗೊಬ್ಬ ಮಗನಾದ. ಅವನೇ ಭಗೀರಥ. ಗಂಗಾವತರಣದ ಕೊರಗಿನಲ್ಲಿಯೇ ದಿಲೀಪನು ಕಾಲಧರ್ಮಕ್ಕೊಳಗಾದನು. ಭಗೀರಥನು ರಾಜನಾದನು. ಸಗರ ಪುತ್ರರ ಸಲಿಲ ಕ್ರಿಯೆಯ ಹೊಣೆಗಾರಿಕೆ ಇವನ ಹೆಗಲಿಗೆ ಬಂದಿತು. ಸಗರ, ಅಂಶುಮಂತ, ದಿಲೀಪ ಇವರುಗಳ ಕಾರ್ಯವೈಖರಿಗಳನ್ನು ಹಲವು ಮುಖಗಳಲ್ಲಿ,

ಆಯಾಮಗಳಲ್ಲಿ ನೋಡಿದನು. ಎಲ್ಲವನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿದನು. ಸಮಾನವಾದ ಅಂಶವನ್ನು ಹುಡುಕಿ ತೆಗೆದನು. ಅವರೆಲ್ಲರಲ್ಲಿಯೂ ಗಂಗಾವತರಣವಾಗಲೇಬೇಕೆಂಬ ಕಳಕಳಿಯಿತ್ತು. ಆದರೆ ಪ್ರತಿಯೊಬ್ಬರೂ ತಮ್ಮ ಸಂಸ್ಕಾರ, ಶ್ರಾದ್ಧಗಳ ವ್ಯವಸ್ಥೆಗೆ ಮಗನೊಬ್ಬ ಜನಿಸಿದ ನಂತರ ಯೋಚಿಸಿದ್ದರು. ಭಗೀರಥನು ಇದನ್ನೇ ತನ್ನಲ್ಲಿ ಕಾಣಬಾರದೆಂದು ಮೊದಲಿಗೆ ದೃಢವಾಗಿ ನಿಶ್ಚಯಿಸಿಕೊಂಡನು. ಭಗೀರಥನ ಚಿಂತನೆ ಅವರೆಲ್ಲರ ಚಿಂತೆಯ ಸರಣಿಗಿಂತಲೂ ಭಿನ್ನವಾಗಿತ್ತು. ಮೊದಲಿಗೆ ಸಮಸ್ಯೆಯನ್ನು ಸರಿಯಾಗಿ ತಿಳಿದರೆ ಅದನ್ನು ಅರ್ಧ ಬಿಡಿಸಿದಂತೆಯೇ ಎಂದು ಅರಿತ. ಯುವಕನಾಗಿದ್ದ ಅವನಿಗೆ ಆಗಷ್ಟೇ ಅಧಿಕಾರ ಸಿಕ್ಕಿ, ಮದುವೆಯಾಗಿತ್ತು. ತನಗಾಗಲೇ ಬೇಕಿದ್ದ ಸಂತತಿಯ ಹಾಗೂ ಸುಖದ ವಿಚಾರಗಳ ಸ್ಥಾನದಲ್ಲಿ ಪೂರ್ವಜರಿಗೆ ಸದ್ಗತಿ ಪ್ರಾಪ್ತಗೊಳಿಸುವ ವಿಚಾರವನ್ನು ಇಟ್ಟನು. ಹಿಂದಿನ ಚಿಂತೆಯ ಕತ್ತಲಲ್ಲಿ ಗಂಗಾವತರಣದ ವಿಚಾರ ಮಂಥನ ನಡೆದಿತ್ತು. ಆ ಮಂಥನದಿಂದ ಪೂರ್ಣಚಂದ್ರನಂತಹ ಚಿಂತನೆ ಬೆಳಗಿತ್ತು.

ಗಂಗಾವತರಣವಾದಲ್ಲಿ ಮಾತ್ರ ತನಗೆ ವಂಶೋದ್ಧಾರಕನಾದ, ತನ್ನ ಸಂಸ್ಕಾರ, ಶ್ರಾದ್ಧ ಮಾಡುವ ಮಗನಾಗಲಿ. ಇಲ್ಲವಾದಲ್ಲಿ ಬೇಡವೇ ಬೇಡ ಎಂದು ಬಲವಾಗಿ ನಿಶ್ಚಯಿಸಿ ವಜ್ರಸಂಕಲ್ಪಗೈದನು. ಇವನದು ಸ್ವಪ್ರೇರಣೆ, ಅಂತರಂಗದಲ್ಲಿನ ಬೆಳಕನ್ನು ಕಂಡಿದ್ದಾನೆ. ಆ ಬೆಳಕನ್ನು ಎಲ್ಲರಿಗೂ ಹಂಚಲು ಸಿದ್ಧನಾಗಿದ್ದಾನೆ. ರಾಜ್ಯಾಧಿಕಾರದ ಸೂತ್ರವನ್ನು ಮಂತ್ರಿಗಳಿಗೊಪ್ಪಿಸಿದನು. ಎಲ್ಲರ ಶುಭಕಾಮನೆಯೊಡನೆ, ಗಂಗೆಯನ್ನು ಧರೆಗಿಳಿಸಲೇಬೇಕೆಂಬ ನಿರ್ಣಯದಿಂದ ಹಿಮಾಲಯದಲ್ಲಿ ಕಠಿಣವಾಗಿ, ಜಿತೇಂದ್ರಿಯನಾಗಿ ಸಾವಿರ ವರ್ಷಗಳ ಕಾಲ ಘೋರ ತಪಸ್ಸು ಮಾಡಿದನು. ಬ್ರಹ್ಮನು ಸುಪ್ರೀತನಾಗಿ ಬಂದರೂ ಭಗೀರಥನು ಏಕಾಗ್ರಚಿತ್ತನಾಗಿದ್ದನು. ಬ್ರಹ್ಮನು, 'ನಿನ್ನ ಸಾತ್ವಿಕ ತಪಸ್ಸಿನಿಂದ ಪ್ರಸನ್ನನಾಗಿದ್ದೇನೆ. ನಿನಗೆ ಬೇಕಾದ ವರಗಳನ್ನು ಕೊಡಲು ಸಿದ್ಧನಾಗಿರುವೆ' ಎಂದನು. ಮಹಾ ತಪಸ್ವಿಯು ವಿನೀತನಾಗಿ, 'ಹೇ ಭಗವನ್, ನೀನು ಮೆಚ್ಚಿ, ಈ ತಪಸ್ಸಿಗೆ ಫಲ ನೀಡುವುದೇ ಆದರೆ, ಮೊದಲಿಗೆ ನನ್ನ ಪೂರ್ವಜರಾದ ಸಗರ ಪುತ್ರರೆಲ್ಲರೂ ಗಂಗಾಜಲದ ಮೂಲಕ ನನ್ನಿಂದ ತರ್ಪಣವನ್ನು ಪಡೆಯುವಂತೆ ಅನುಗ್ರಹಿಸು. ಗಂಗಾಪ್ರವಾಹವು ಹರಿದು ಅವರೆಲ್ಲರಿಗೂ ಮುಕ್ತಿ ದೊರೆಯಬೇಕು. ಇದು ಪೂರ್ಣವಾಗುವುದಾದರೆ ಮತ್ತೊಂದು ವರವನ್ನು ಕೇಳಿಕೊಳ್ಳುತ್ತೇನೆ. ಅದೇ, ಇಕ್ಷ್ವಾಕು ವಂಶವು ಯಾವ ಕಾರಣದಿಂದಲೂ ನಿಂತುಹೋಗಬಾರದೆಂದಿದ್ದರೆ ನನಗೆ ಸಂತತಿಯನ್ನು ಕರುಣಿಸು' ಎಂದು ಪ್ರಾರ್ಥಿಸಿದನು.

ಪಿತಾಮಹನು, 'ಭಗೀರಥನೇ, ನಿನ್ನ ಮನೋರಥ ಮಹತ್ತರವಾಗಿದೆ. ಎಲ್ಲವೂ ನಿನ್ನಿಚ್ಛೆಯಂತೆಯೇ ಆಗಲಿ. ಗಂಗಾವತರಣ ಕೂಡ ಸಂಭವಿಸುವುದು. ಸಂತತಿಯೂ ಪ್ರಾಪ್ತವಾಗುವುದು. ನೀನು ಇಕ್ಷ್ವಾಕು ವಂಶದ ಉದ್ಧಾರಕನೂ ಆಗುವೆ. ಗಂಗೆಯು ಭೂಮಿಗೆ ವೇಗವಾಗಿ ಧುಮುಕುವಳು. ಈ ಭೂಮಿಯು ಅವಳ ರಭಸವನ್ನು ತಾಳದು. ಅವಳು ತಡೆಯೊಂದರ ಮೂಲಕ ಭೂಮಿಗೆ ಇಳಿಯಲಿ. ತ್ರಿಶೂಲಧಾರಿ ಶಿವನು ಗಂಗೆಯ ರಭಸವನ್ನು ತಡೆಯುವನು. ಹೀಗಾಗಿ ನೀನೀಗ ಅವನನ್ನೇ ಪ್ರಾರ್ಥಿಸಬೇಕು' ಎಂದನು. ಸೃಷ್ಟಿಕರ್ತನು ಗಂಗಾದೇವಿಗೆ ಸೂಕ್ತ ಸಮಯದಲ್ಲಿ ಭಗೀರಥನ ಪ್ರಾರ್ಥನೆಯನ್ನು ಪೂರ್ಣಗೊಳಿಸಲು ಸೂಚಿಸಿದನು.

ಸಾಧಕ ಭಗೀರಥನು ಮುಂದಿನ ಭಾಗವನ್ನು ಕ್ರಿಯಾನ್ವಯಗೊಳಿಸಲು ಉದ್ಯುಕ್ತನಾದನು. ತುದಿಗಾಲಿನಲ್ಲಿ ಬಲಗಾಲ ಹೆಬ್ಬೆರಳ ಮೇಲೆ ನಿಂತನು. ಆಹಾರವನ್ನು ವರ್ಜಿಸಿದನು. ಹಗಲೂ, ರಾತ್ರಿ ಘನಘೋರವಾದ ತಪಸ್ಸಿನಲ್ಲಿಯೇ ತನ್ಮಯನಾದನು. ಒಂದು ವರ್ಷಗಳ ಕಾಲ ಈಶ್ವರನನ್ನೇ ಏಕಾಗ್ರಚಿತ್ತನಾಗಿ ಧ್ಯಾನಿಸಿದನು. ಪರಮೇಶ್ವರನು ಕರುಣಾಕರನಾಗಿ ಭಗೀರಥನ ಮುಂದೆ ಪ್ರಕಟಗೊಂಡನು. 'ಹೇ ನರಶ್ರೇಷ್ಠನೇ, ನಿನ್ನ ಆಶಯದಂತೆ ನಾನು ಶೈಲರಾಜ ಸುತೆಯನ್ನು ಶಿರಸ್ಸಿನಲ್ಲಿ ಧರಿಸುವೆ' ಎಂದನು.

ಗಂಗಾವತರಣಕ್ಕಾಗಿ ಎಲ್ಲ ರೀತಿಯ ಸಿದ್ಧತೆಯಾಯಿತು. ಭಗೀರಥನು ಗಂಗೆಯನ್ನು ಕುರಿತು ಉತ್ಕಟವಾಗಿ ಪ್ರಾರ್ಥಿಸಿದನು. ಅವನ ಸನ್ಮನದ, ಹೃನ್ಮನದ ಪ್ರಾರ್ಥನೆಗೆ ಮಣಿದು ಗಂಗೆಯೊಲಿದಳು. ಭುವಿಗೆ ಧುಮ್ಮಿಕ್ಕುವ ನಿರ್ಧಾರ ಮಾಡಿದಳು. ಆದರೆ ಗಂಗೆಯು ಶಿವನ ಶಿರದಲ್ಲಿಳಿಯಲು ಇಚ್ಛಿಸಲಿಲ್ಲ. ಭೂಮಿಗೆ ಬರಲು ಮುಂದಾದರೂ ಅದರ ಹಿಂದಿನ ಘಟ್ಟಕ್ಕೆ ಹಿಂಜರಿದಳು. 'ನಾನಿಂದು ಶಿವನಿಗೂ ಧರಿಸಲಶಕ್ಯಳಾಗುವೆ. ನನ್ನ ಪ್ರವಾಹದ ವೇಗದಿಂದ ಇವನನ್ನೂ ಪಾತಾಳಕ್ಕೆ ಸೆಳೆದೊಯ್ಯುವೆ' ಎಂದು ಸಂಕಲ್ಪಿಸಿದಳು. ಮನದ ಅಭಿಮಾನಿ ದೇವತೆಯಾದ ಈಶ್ವರನಿಗೆ ಅವಳು ಅಲ್ಲಿ ಯೋಚಿಸುತ್ತಿರುವಂತೆಯೇ ಎಲ್ಲವೂ ತಿಳಿಯಿತು.

'ನಾನು' ಎಂಬುದು ಎದ್ದು ನಿಂತಾಗ ಎಲ್ಲರೂ ಸಣ್ಣವರಾಗುವರು. ಭಗೀರಥನು ಇವರೆಲ್ಲರಿಗಿಂತಲೂ ದೊಡ್ಡವನಾಗಿದ್ದಾನೆ. ತ್ರ್ಯಂಬಕನು ಅವಳ ಗರ್ವವನ್ನು ತಿಳಿದು ಕ್ರುದ್ಧನಾದನು. ಭಗೀರಥನ ಮೊರೆ, ಅಂತರಂಗದ ಕರೆ ಗಂಗೆಗೆ ಕೇಳಿಸಿತು. ತಕ್ಷಣವೇ ಶಿವನ ಶಿರಸ್ಸಿನ ಮೇಲೆ ಧುಮುಕಿದಳು. ಭಗೀರಥನ ಪ್ರಾರ್ಥನೆ ಫಲಿಸಿತು. ಗಂಗೆಯು ಪರಮೇಶ್ವರನ ತಲೆಯ ಮೇಲೆ ಬೀಳುವುದನ್ನು ನೋಡುತ್ತಿದ್ದಾನೆ. ಆದರೆ ಅವಳು ಧರೆಗಿಳಿಯುವುದು ಮಾತ್ರ ಕಾಣುತ್ತಿಲ್ಲ. ಶಂಕರನು ತನ್ನ ಜಟೆಯನ್ನು ಸುತ್ತಿ ಮಾಡಿದ ಮುಡಿಯಲ್ಲಿ ಗಂಗೆ ಸಿಲುಕಿ ಬಂಧಿತಳಾದಳು. ಗಂಗೆಯು ಹಲವಾರು ವರ್ಷಗಳವರೆಗೆ ಮಹೇಶ್ವರನ ಜಟಾಮಂಡಲದಲ್ಲಿಯೇ ಸುತ್ತುತ್ತಿದ್ದಳು.

ಭಗೀರಥನ ಸ್ಥಿತಿ ಹೇಗಾಗಿದ್ದಿರಬಹುದು? ಏನಾಗಿದ್ದಿರಬಹುದು? ಮೂರು ತಲೆಮಾರಿನ ನಂತರ, ಹಲವಾರು ಪ್ರಯತ್ನಗಳ ಮೇಲೆ ಗಂಗೆ ಇನ್ನೇನು ಧರೆಗಿಳಿದಳು ಎನ್ನುವಾಗ ಮಧ್ಯದಲ್ಲಿಯೇ ಇಲ್ಲದಂತಾಗುವುದೆ? ಈಗಾಗಲೇ ಮೂರು ಬಾರಿ ತಪಸ್ಸಾಗಿದೆ (ಬ್ರಹ್ಮ, ಈಶ್ವರ ಹಾಗೂ ಗಂಗೆಯನ್ನು ಕುರಿತು).

ಬೇರೆ ದಾರಿಯಿಲ್ಲ, ನಾಲ್ಕನೆ ತಪಸ್ಸಿಗೆ ದಾರಿಯಾಗಿದೆ. ಹರನನ್ನು ಮೆಚ್ಚಿಸಲು ಮತ್ತೆ ತಪಸ್ಸಿನ ಆಚರಣೆಯಲ್ಲಿ ತೊಡಗಿದನು ಭಗೀರಥ. ಅವನ ಎರಡನೇ ತಪಸ್ಸಿನ ಪ್ರಭೆ-ತೇಜಸ್ಸುಗಳು ಶಿವನಲ್ಲಿ ಪರಿಣಾಮ ಬೀರಿತು. ಎರಡನೇ ಬಾರಿಗೂ ಹರನನ್ನು ಮೆಚ್ಚಿಸುವುದರಲ್ಲಿ ಭಗೀರಥನೇ ಗೆದ್ದಿದ್ದ.

ಪರಮಪ್ರೀತನಾದ ಶಿವನು ಬಂಧಿತಳಾಗಿದ್ದ ಗಂಗೆಯನ್ನು ಜಟೆ ತೆರೆದು ಬಿಂದು ಸರೋವರದ ಕಡೆಗೆ ಬಿಡುಗಡೆಗೊಳಿಸಿದನು. ಶಂಕರನ ಜಟೆಯಿಂದ ಧರೆಗಿಳಿದ ಗಂಗೆ ಏಳು ಪ್ರವಾಹಗಳಾಗಿ, ಮಂಗಳಕರವಾಗಿ ಹರಿದಳು. ಹ್ಲಾದಿನಿ, ಪಾವನೀ, ನಲಿನೀ ಎಂಬ ಮೂರು ಗಂಗಾ ಪ್ರವಾಹಗಳು ಪೂರ್ವ ದಿಕ್ಕಿಗೆ ಪ್ರವಹಿಸಿದವು. ಸುಚಕ್ಷು, ಸೀತಾ, ಸಿಂಧುವೆಂಬ ಮಹಾ ಪ್ರವಾಹಗಳು ನದಿಯಾಗಿ ಪಶ್ಚಿಮಕ್ಕೆ ಹರಿದವು. ಅಲಕನಂದಾ ಎಂಬ ಗಂಗೆಯ ಏಳನೆಯ ಪ್ರವಾಹವು ಭಗೀರಥನನ್ನು ಅನುಸರಿಸಿ ಹರಿಯತೊಡಗಿತು. ಪೂರ್ವ, ಪಶ್ಚಿಮ ಹಾಗೂ ಭಗೀರಥನನ್ನು ಅನುಸರಿಸಿದ್ದರಿಂದ ಗಂಗೆಯು 'ತ್ರಿಪಥಗಾ' ಎಂಬ ಹೆಸರನ್ನು ಪಡೆದಳು. ಸರ್ವಪಾಪ ಪರಿಹಾರಕಳಾದ ಗಂಗೆ ಹೋಗುವಾಗ ಭಗೀರಥನು ಅವಸರಪಡಿಸುತ್ತಿರಲಿಲ್ಲ. ಗಂಗಾವತರಣವು ಕೇವಲ ತನ್ನ ಪಿತೃಗಳ ಉದ್ಧಾರಕ್ಕೆ ಮಾತ್ರವೆಂದು ತಿಳಿಯಲಿಲ್ಲ. ಸಗರ ಪುತ್ರರರಿಗಿಂತ ಮೊದಲು ಸಾವಿರಾರು ಜನರ ಸದ್ಗತಿಯಾಗುವಾಗ ಸರ್ವಹಿತ ಮನೋಭಾವವಿದ್ದ ಮಹಾನುಭಾವ ಭಗೀರಥನು ತಡೆಯೊಡ್ಡಲಿಲ್ಲ. ಗಂಗೆಯ ಪುಣ್ಯತೀರ್ಥದಿಂದ ಪತಿತರು ಪಾವನರಾದರು.

ಭಗೀರಥನ ಶ್ರೇಷ್ಠತೆಗೆ ಮಣಿದು ಗಂಗೆ ಅವನನ್ನು ಹಿಂಬಾಲಿಸಿದಳು. ಭಗೀರಥನ ಮಹಾ ಪ್ರಯತ್ನವನ್ನು ಮೆಚ್ಚಿ ಋಷಿ-ಮುನಿಗಳೂ ಅವನನ್ನು ಹಿಂಬಾಲಿಸುತ್ತಿದ್ದಾರೆ. ಅದೇ ದಾರಿಯಲ್ಲಿ ಜಹ್ನು ಮಹರ್ಷಿಯು ಯಾಗದಲ್ಲಿ ಮಗ್ನನಾಗಿದ್ದ. ಅವನು ಭಗೀರಥನನ್ನಾಗಲೀ, ಗಂಗೆಯನ್ನಾಗಲೀ ಕಾಣಲಿಲ್ಲ. ಗಂಗೆ ಇದರ ಬಗ್ಗೆ ಲಕ್ಷ್ಯ ಕೊಟ್ಟಳು. ಮತ್ತೆ ಅವಳ ಮನದಲ್ಲಿ ಅಹಂಕಾರದ ಪ್ರವೇಶವಾಯಿತು. ತಾನೇನು ಕಡಿಮೆಯೆಂದು ಯಾಗಶಾಲೆಯನ್ನು ಮುಳುಗಿಸಿದಳು. ಗಂಗಾದೇವಿಯ ಕಾರ್ಯದಿಂದ ಮಹರ್ಷಿಯೂ ಕುಪಿತನಾದನು. ಕ್ರುದ್ಧನಾಗಿ ಅವಳ ಎಲ್ಲ ಜಲವನ್ನು ಒಂದೇ ಆಪೋಶನವಾಗಿ ಕುಡಿದನು. ಭಗೀರಥನು ಒಮ್ಮೆ ಹಿಂತಿರುಗಿ ನೋಡುತ್ತಾನೆ, ಗಂಗೆಯೇ ಕಾಣುತ್ತಿಲ್ಲ. ಈಗ ಭಗೀರಥನ ಸ್ಥಿತಿ ಏನಾಗಬೇಕು? ಕಣ್ಣತ್ತಲೆಯಾಗಿ ಕುಸಿದು ಮರಣೋನ್ಮುಖನಾದನು. ಇದನ್ನು ಅರಿತು, ಅನುಸರಿಸುತ್ತಿದ್ದ ದೇವತಾದಿಗಳು ಸಂವೇದನಾಶೀಲರಾದರು. ಭಗೀರಥನ ಮಹಾನತೆಗೆ ಹೃತ್ಪೂರ್ವಕವಾಗಿ ಸೋತರು. ಅವನ ಪರವಾಗಿ ಜಹ್ನು ಋಷಿಯನ್ನು ಪ್ರಾರ್ಥಿಸಿದರು. ಭಗೀರಥನ ಬಗ್ಗೆ ಸವಿವರ ತಿಳಿಸಿ ಬಿನ್ನವಿಸಿದರು. ಮನಃಪೂರ್ವಕವಾಗಿ ಗಂಗೆಯನ್ನು ಕ್ಷಮಿಸಲು ಬೇಡಿದರು. ಗಂಗೆಯನ್ನು ನಿನ್ನ ಮಗಳಂತೆ ಕಾಣಬೇಕೆಂದರು. ಅವಳು ಅಂತೆಯೇ ಪ್ರಸಿದ್ಧಿಯಾಗುವಳೆಂದರು. ತಪ್ಪಿದಲ್ಲಿ ನಿಃಸ್ವಾರ್ಥ ತಪಸ್ವಿಯೊಬ್ಬನ ದೇಹಾಂತ್ಯಕ್ಕೆ ಕಾರಣವಾದ ಫಲ ನಿಮಗೆ ಲಭಿಸುವುದೆಂದರು. ಅವರೆಲ್ಲರ ನಿವೇದನೆಗೆ ಜಹ್ನುವು ಪ್ರಸನ್ನನಾದನು. ತಕ್ಷಣವೇ ತನ್ನ ಕಿವಿಗಳ ಮೂಲಕ ಗಂಗೆಯನ್ನು ಹರಿಯಬಿಟ್ಟನು. ಇದರಿಂದಲೇ ಗಂಗೆಯನ್ನು ಜಾಹ್ನವಿಯೆಂದೂ ಕರೆಯುವರು. ಮತ್ತೆ ಧರೆಯಲ್ಲಿ ಗಂಗೆ ಗಂಭೀರಗಮನೆಯಾಗಿ ಭಗೀರಥನ ಹಿಂದೆ ಹೊರಟಳು.

''ಭಗೀರಥನು ಕಾರ್ಯಸಿದ್ಧಿಗಾಗಿ ಸಗರ ಪುತ್ರರು ಬೂದಿಯಾಗಿದ್ದ ಸ್ಥಾನಕ್ಕೆ ಹೋದನು. ಅದರ ಮೇಲೆ ಗಂಗಾಪ್ರವಾಹ ಹರಿಸಿದನು. ಅವರೆಲ್ಲರೂ ಪವಿತ್ರಾತ್ಮರಾಗಿ ಸ್ವರ್ಗ ಸೇರಿ ಸದ್ಗತಿಯನ್ನು ಪಡೆದರು. ಭಗೀರಥನ ಸಾಧನೆಯನ್ನು ಮೆಚ್ಚಿ ಬ್ರಹ್ಮನು ಮತ್ತೆ ಪ್ರತ್ಯಕ್ಷನಾದನು. 'ಹೇ ಪುರುಷ ಶ್ರೇಷ್ಠ, ನಿನ್ನ ಪೂರ್ವಜರು ನಿನ್ನಿಂದ ಉದ್ಧಾರವಾದರು. ದೇವತೆಗಳಂತೆಯೇ ದೇದೀಪ್ಯಮಾನರಾಗಿ ದೇವಲೋಕಕ್ಕೆ ತೆರಳಿದರು. ನೀನೀಗ ಮಹಾ ಸುಕೃತಗೈದಿರುವೆ. ನಿನ್ನ ಮಹಾಕಾರ್ಯದಿಂದ ಗಂಗೆಯು ನಿನ್ನ ಹಿರಿಯ ಮಗಳಂತಾದಳು. ಹಾಗೂ ಈ ಬೃಹತ್ ಸಾಧನೆಯ ಸ್ಮರಣಾರ್ಥವಾಗಿ ಅವಳು ನಿನ್ನ ಹೆಸರಿನಿಂದ 'ಭಾಗೀರಥಿ' ಎಂದು ಖ್ಯಾತಳಾಗಲಿ. ಸ್ವರ್ಗ, ಮನುಷ್ಯ, ಪಾತಾಳ ಲೋಕಗಳಲ್ಲಿ ಹರಿದಾಡುವ ಇವಳಿಗೆ 'ತ್ರಿಪಥಗಾ' ಎಂಬ ಅಭಿದಾನವು ನಿನ್ನ ಮಹಾ ಪ್ರಯತ್ನದಿಂದಲೇ ಪ್ರಾಪ್ತವಾಗಿದೆ. ನಿನ್ನ ಹಿರಿಯರಿಗೆ ತರ್ಪಣವನ್ನು ಕೊಟ್ಟು ನಿನ್ನ ಪ್ರತಿಜ್ಞೆಯನ್ನು ಸಂಪನ್ನಗೊಳಿದೆ. ನಿನಗೆ ಸರ್ವರೀತಿಯಲ್ಲೂ ಮಂಗಳವಾಗುವುದು. ಲೋಕಕ್ಕೆ ಸದಾಕಾಲ ಸದುಪಯೋಗವಾಗುವ ಮಹಾಕಾರ್ಯ ಮಾಡಿರುವೆ. ಭಗೀರಥ, ನೀನು ಧನ್ಯ, ಧನ್ಯನಲ್ಲದೇ ಮಾನ್ಯನೂ ಆದೆ. ನಿನ್ನ ಪೂರ್ವಜರೆಲ್ಲರಿಂದ ಅಸಾಧ್ಯವಾದುದನ್ನು ನೀನು ಜೀವಿತದ ಅತ್ಯಲ್ಪ ಅವಧಿಯಲ್ಲಿ ಪ್ರತ್ಯಕ್ಷವಾಗಿ ಸಾಧಿಸಿ ತೋರಿಸಿರುವೆ. ಜನತೆಯ ಮನ ಮೆಚ್ಚುವಂತೆ ಮಹಾನ್ ಕೀರ್ತಿಗೆ ಭಾಗಿಯಾದೆ. ಕಿರಿಯ ವಯಸ್ಸಿನಲ್ಲಿ ಉತ್ತಮವಾದ ಯಶಸ್ಸನ್ನು ಸಂಪಾದಿಸಿದೆ. ಪಿತೃಋಣದ ಧರ್ಮವನ್ನು ಸಂರಕ್ಷಿಸಿ, ಆಚರಿಸಿ, ನೀನೂ ಧರ್ಮದಿಂದ ರಕ್ಷಿತನಾಗಿರುವೆ. ಜನರಿಗೆ ನಿರಂತರವಾಗಿ ಜಲ ದೊರೆಯುವ ಸೇವೆ ಮಾಡಿ ಲೋಕಕ್ಕೆ ಆದರ್ಶನಾಗಿರುವೆ' ಎಂದನು. ಸರ್ವೋತ್ಕೃಷ್ಟ ವ್ಯಕ್ತಿತ್ವವನ್ನು ಸ್ವತಃ ಸದಸದ್ವಿವೇಕದಿಂದ, ಶಾಂತಿ, ಸಹನೆಗಳ ಅನುಭವಗಳಿಂದ ಸಂಪಾದಿಸಿಕೊಳ್ಳುವುದನ್ನು ಭಗೀರಥನು ತನ್ನ ನಡವಳಿಕೆಯಲ್ಲಿ ತೋರಿಸಿದ್ದಾನೆ. ಅದನ್ನು ತಾನು ಮಾಡಿದ ಮೂರು ತಪಸ್ಸಿನಲ್ಲಿ, ಗಂಗಾವತರಣದ ಸಂದರ್ಭದಲ್ಲಿ ಆಚರಿಸಿದ್ದಾನೆ. ಹಿಡಿದ ಕಾರ್ಯ ಗುರಿ ಮುಟ್ಟುವವರೆಗೂ ಸತತ ಪರಿಶ್ರಮಯುಕ್ತ ಪ್ರಯತ್ನ ಮಾಡಿದ್ದಾನೆ. ಎಡೆಯಲ್ಲಿ ಎಡರು-ತೊಡರುಗಳಾದರೂ ಎದೆಗುಂದಿಲ್ಲ, ಎಲ್ಲಿಯೂ ಉದ್ವೇಗಕ್ಕೊಳಗಾಗದೆ ಹಿಂದೆಗೆಯದೆ, ಮಿತಭಾಷಿಯಾಗಿ ಮಹತ್ತರವಾದ ಸಾಧನೆ ಮಾಡಿದ ಭಗೀರಥ'' ಎಂದರು ವಿಶ್ವಾಮಿತ್ರರು.